**<u>ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಎನ್ ಕೆ ವಕೀಲರಿಂದಃ-</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಎನ್ನುತ್ತಾರೆ. ವಾದಿಯು ನನ್ನ ಮತ್ತು ಕೆಂಪೇಗೌಡ ರವರ ವಿರುದ್ದ ದಾವೆ ಮಾಡಿರುತ್ತಾರೆ. ತಾವು ತಮ್ಮ ಮತ್ತು ಪ್ರತಿವಾದಿ 2 ರವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2 ನೇ ಪ್ರತಿವಾದಿ ತಮಗೆ ಸಂಬಂಧದಲ್ಲಿ ಏನು ಆಗಬೇಕು ಎಂದರೆ ಸಾಕ್ಷಿಯು ಅವರೇ ಬೇರೆ ನಾನೇ ಬೇರೆ ಎನ್ನುತ್ತಾರೆ. ದಾವಾ ಸ್ವತ್ತು ಸರ್ವೆ ನಂ ಬರ್ ಆಸ್ತಿಯ ವಿಸ್ತೀರ್ಣ ಎಷ್ಟು ಇತ್ತು ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ ಎನ್ನುತ್ತಾರೆ. ನಾನು ಜಗದಾಪುರ ಗ್ರಾಮದಲ್ಲೇ ಹುಟ್ಟಿ ಬೆಳೆದಿರುತ್ತೇನೆ ಎಂದರೆ ಸರಿ. ಶಿವಾಜಿ ರಾವ್ ಸೂರ್ಯವಂಶಿ ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎನ್ನುತ್ತಾರೆ. ಶಿವಾಜಿ ರಾವ್ ಸೂರ್ಯವಂಶಿ ಅವರಿಗೆ ಎಷ್ಟು ಜನ ಮಕ್ಕಳು 3 ಜನ ಮಕ್ಕಳು ಎಂದು ನುಡಿದು ಅವರೆಂದರೆ 1. ಮಹದೇವ ಮತ್ತು ಇನ್ನಿಬ್ಬರ ಹೆಸರು ನನಗೆ ನೆನಪಿಲ್ಲ. ನಾರಾಯಣ ರಾವ್ ಮತ್ತು ಸೂರೋಜಿ ರಾವ್ ರವರು ಸಹ ಶಿವಾಜಿ ರಾವ್ ಸೂರ್ಯವಂಶಿರವರ ಇನ್ನಿಬ್ಬರು ಮಕ್ಕಳು ಎಂದರೆ ಸರಿ. ಈ ದಾವೆಯ ವಾದಿಯು ಶಿವಾಜಿ ರಾವ್ ಸೂರ್ಯವಂಶಿರವರ ಮೊದಲನೇ ಮಗ ಮಹದೇವರಾವ್ ರವರ ಮಗ ಎಂದರೆ ಸರಿ. ಶಿವಾಜಿ ರಾವ್ ಸೂರ್ಯವಂಶಿರವರ ಮೂರು ಜನ ಮಕ್ಕಳು ದಾವಾ ಆಸ್ತಿಯನ್ನು ತಮ್ಮ ನಡುವೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿಯವರು ಭಾಗ ಮಾಡಿಕೊಂಡ ನಂತರ ನನಗೆ ನಿವೇಶನ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಶಿವಾಜಿ ರಾವ್ ಸೂರ್ಯವಂಶಿರವರ ಮೂರನೇ ಮಗ ಸುರೋಜಿ ರಾವ್ ರವರು ತಮ್ಮ ಭಾಗಕ್ಕೆ ಬಂದ 20 ಗುಂಟೆ ಆಸ್ತಿಯನ್ನು ನಾರಾಯಣ

ರಾವ್ ಮುಳಿಕ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನಗೆ ಸೈಟನ್ನು ಮಾರಾಟ ಮಾಡಿದ್ದು ಆ ಸ್ಟೆಟನ್ನು ಬಿಟ್ಟು ಉಳಿದ ಆಸ್ತಿಯನ್ನು ಮಾರಾಟ ಮಾಡಿದ್ದರು ಎನ್ನುತ್ತಾರೆ. ಸದರಿ ಸೂರೋಜಿ ರಾವ್ ರವರು ಮಾರಾಟ ಮಾಡಿದ ನಂತರ ನಾರಾಯಣ ರಾವ್ ಮುಳಿಕ್ ರವಗೆ ಎಂ ಆರ್ 1/1992-93 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮಾವಿನ ತೋಟ ಮಾತ್ರ ಖಾತೆ ಆಗಿರುತ್ತದೆ ಸೈಟನ್ನು ಹೊರತುಪಡಿಸಿ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯ ತಂದೆ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ.

ನಾನು ಮತ್ತು ಮೃತ 2ನೇ ಪ್ರತಿವಾದಿ ಕೆಂಪೇಗೌಡ ವೃತ್ತಿಯಲ್ಲಿ ವ್ಯವಸಾಯ ಎಂದರೆ ಸರಿ. ನಾನು ಮತ್ತು ಮೃತ 2ನೇ ಪ್ರತಿವಾದಿ ಸ್ನೇಹಿತರು ಎಂದರೆ ಸರಿಯಲ್ಲ. ಮೃತ 2ನೇ ಪ್ರತಿವಾದಿ ಜೆ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಸ್ಪರ್ಧಿಸಿ ಗೆದ್ದು ಅಧ್ಯಕ್ಷರಾಗಿದ್ದರು ಎನ್ನುತ್ತಾರೆ. ಯಾವ ಸಾಲಿನಲ್ಲಿ ಅಧ್ಯಕ್ಷರಾಗಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಅವರ ಕುಟುಂಬಸ್ಥರು ಇವತ್ತಿಗೂ ವ್ಯವಸಾಯ ಚಟುವಟಿ ಕೆ ಮಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಲ್ಲವನ್ನೂ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಜಗದಾಪುರ ಗ್ರಾಮದಲ್ಲಿ ವಾದಿಯು ವಾಸ ಇದ್ದಾರೆ ಎಂದರೆ ಸಾಕ್ಷಿಯು ಅವರು ಬೆಂಗಳೂರಿನಲ್ಲಿ ವಾಸ ಇದ್ದಾರೆ, ಜಗದಾಪುರ ಗ್ರಾಮದಲ್ಲಿ ಅವರ ಮನೆ ಇದೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ತೆಂಗಿನ ಮರ, ಮಾವಿನ ಮರ, ಹಲಸಿನ ಮರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 1 ಎಕರೆ ಪಾಳು ಬಿದ್ದಿದೆ ಎನ್ನುತ್ತಾರೆ. ನಾನು ಮತ್ತು ಮೃತ ಕೆಂಪೇಗೌಡ ವಾದಿಯವರಿಗೆ ಸೇರಿದ ದಾವಾ ಆಸ್ತಿಯಲ್ಲಿ ಇರುವ ಮಾವಿನ ಮರಗಳಿಗೆ ಕುರಿ ಮೇಕೆ ಮತ್ತು ದನಗಳನ್ನು ಕಟ್ಟಿ ರೆಂಬೆ ಕೊಂನಬೆಗಳನ್ನು ಮುರಿದು ಹಾಕುತ್ತಿದ್ದರಿಂದ ನಮಗೂ

ವಾದಿಗೂ ಜಗಳ ಆಗುತ್ತಿತ್ತು ಎಂದರೆ ಸಾಕ್ಷಿಯು ನಮ್ಮ ಮತ್ತು 2 ನೇ ಪ್ರತಿವಾದಿಯ ಮನೆಯಲ್ಲಿ ದನ ಕುರಿ ಮೇಕೆಗಳು ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮತ್ತು ವಾದಿಯರ ನಡುವೆ ಆಸ್ತಿಯ ವಿಚಾರವಾಗಿ ಜಗಳ ಆದ್ದರಿಂದ ವಾದಿಯು ಅಕ್ಕೂರು ಠಾಣೆಗೆ ಪಿರ್ಯಾದು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಪಿರ್ಯಾದು ಕೊಟ್ಟಿರುವುದು ನಿಜ , ನಾವು ಅವರ ಸಹವಾಸಕ್ಕೆ ಹೋಗಿಲ್ಲ ಎನ್ನುತ್ತಾರೆ. ಅಕ್ಕೂರು ಪೊಲೀಸ್ ಠಾಣೆಯಲ್ಲಿ ನಮ್ಮನ್ನು ಮತ್ತು ವಾದಿಯನ್ನು ಕರೆಸಿ ನಮ್ಮ ನಡುವೆ ಸಿವಿಲ್ ವ್ಯಾಜ್ಯ ಇದೆ ಹಾಗಾಗಿ ಸಿವಿಲ್ ವ್ಯಾಜ್ಯ ಬಗೆಹರಿಸಿಕೊಳ್ಳಿ ಎಂದು ಹೇಳಿ ಕಳುಹಿಸಿರುತ್ತಾರೆ ಎಂದರ ಸರಿಯಲ್ಲ. ನಾರಾಯಣ ರಾವ್ ಮುಳಿಕ್ ರವರಿಗೆ ಸೇರಿದ 20 ಗುಂಟೆ ಜಾಗದಲ್ಲಿ ರಸ್ತೆಯನ್ನು ಮಾಡಲಾಗಿದೆ ಎಂದರೆ ಸರಿ.

ದಾವಾ ಆಸ್ತಿಯನ್ನು ದಿಃ 12.10.2018 ರಂದು ವಾದಿಯು ತಾಲ್ಲೂಕು ಕಛೇರಿಗೆ ಅರ್ಜಿ ನೀಡಿ ಆಕಾರ್ ಬಂದ್ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಳೆ ಸರ್ವೆ ನಂ.107/2 ರ 1 ಎಕರೆ 20 ಗುಂಟೆ ಪೈಕಿ 1 ಎಕರೆ ವಿಸ್ತೀರ್ಣವನ್ನು ಅಳತೆ ಮಾಡಿ ವಾದಿಯ ಹೆಸರಿಗೆ ನಕ್ಷೆ ತಯಾರಿಸಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ಎಕರೆ ವಿಸ್ತೀರ್ಣಕ್ಕೆ ನಕ್ಷೆಯನ್ನು ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ಅಂಶಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಏನೂ ಎಂದು ಗೊತ್ತಾಗುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಯಾವ ಭಾಗದಲ್ಲೂ ನಿವೇಶನವನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರ ಕೊಡುವ ಸಲುವಾಗಿ ಮತ್ತು ದಾವಾ ಅಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ 16 ರಿಂದ 20 ಫೋಟೊದಲ್ಲಿ ಕಾಣುವ ಸೈಟು ಯಾವ ಸರ್ವೆ ನಂಬರ್ ಸ್ವತ್ತಿನಲ್ಲಿ ಇದೆ ಎಂದರೆ ಸಾಕ್ಷಿಯು ಹಳೆ ಸರ್ವೆ ನಂ. 107/2 ರ ಸ್ವತ್ತಿನಲ್ಲಿ ಇದೆ ಎನ್ನುತ್ತಾರೆ. ವಾದಿಯು ತಮ್ಮ ಸ್ವತ್ತಿನಲ್ಲಿ ಇಲ್ಲದೇ ಇದ್ದಾಗ ನಾನು ವಾದಿಗೆ ಸೇರಿದ ಸ್ವತ್ತಿಗೆ ಹೋಗಿ

ನಿಂತುಕೊಂಡು ಫೋಟೋ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ಫೋಟೋದಲ್ಲಿ ಕಾಣುವ ಆಸ್ತಿಯಲ್ಲಿ ನಾನು ಎಂಲದಿಗೂ ಸ್ವಾ ಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇವತ್ತಿಗೂ ಸಹ ಕಂಾದಾಯ ವ್ಯಾಪ್ತಿಗೆ ಬರುವ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಮನೆಗಳು ಇಲ್ಲ ಎಂದರೆ ಸರಿಯಲ್ಲ. ಹಾಗಾದರೆ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿಯುು 4 ಮನೆಗಳು ಇವೆ ಎನ್ನುತ್ತಾರೆ. 4 ಮನೆಗಳು ಇವೆ ಎಂದು ತಾವು ಹೇಳಿದ್ದು ಯಾರು ಯಾರು ಸೇರಿಗೆ ಮನೆಗಳು ಇವೆ ಎಂದು ಕೇಳಲಾಗಿ ಸಾಕ್ಷಿಯು ಪೂರ್ವಕ್ಕೆ ಮಾಗೇಗೌಡ, ಪಶ್ಚಿಮಕ್ಕೆ 2 ನೇ ಪ್ರತಿವಾದಿ ಕೆಂಪೇಗೌಡ, ಉತ್ತರಕ್ಕೆ ಮಹಾಲಿಂಗೇಗೌಡ, ದಕ್ಷಿಣಕ್ಕೆ ರಾಚಾಚಾರಿ ಎನ್ನುತ್ತಾರೆ.

ತಾವು ನಿಡಿ 2 ದಾಖಲೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯಲ್ಲಿ ಇರುವ ಆಸ್ತಿ ತಮ್ಮದೆಂದು ಹೇಳಿದ್ದು ಅದರ ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿಯುು ಪೂರ್ವಕ್ಕೆ ಮಾಗೇಗೌಡ, ಪಶ್ಚಿಮಕ್ಕೆ 2 ನೇ ಪ್ರತಿವಾದಿ ಕೆಂಪೇಗೌಡ, ಉತ್ತರಕ್ಕೆ ಮಹಾಲಿಂಗೇಗೌಡ, ದಕ್ಷಿಣಕ್ಕೆ ರಾಚಾಚಾರಿ ಎನ್ನುತ್ತಾರೆ.

ತಾವು ನಿಡಿ 1 ದಾಖಲೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯಲ್ಲಿ ಇರುವ ಆಸ್ತಿ ಕಂಪೇಗೌಡರದು ಎಂದು ಹೇಳಿದ್ದು ಅದರ ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿಯುು ಪೂರ್ವಕ್ಕೆ ಮಾಗೇಗೌಡ, ಪಶ್ಚಿಮಕ್ಕೆ 2 ನೇ ಪ್ರತಿವಾದಿ ಕೆಂಪೇಗೌಡ, ಉತ್ತರಕ್ಕೆ ಮಹಾಲಿಂಗೇಗೌಡ, ದಕ್ಷಿಣಕ್ಕೆ ರಾಚಾಚಾರಿ ಎನ್ನುತ್ತಾರೆ.

2 ನೇ ಪ್ರತಿವಾದಿ ಜೆ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಗಿದ್ದ ಸಮಯದಲ್ಲಿ ನಿಡಿ 1 ಮತು್ತ 2 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ವಾದಿಯರಾಗಲೀ ಅವರ ಪೂರ್ವಜರಾಗಲೀ ಯಾವ ಭಾಗದಲ್ಲಿ ಯಾರಿಗೂ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ

ಆಸ್ತಿಯಲ್ಲಿ ನನಗಾಗಲೀ ಮತ್ತು ಪ್ರತಿವಾದಿಗಾಗಲೀ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ